# ಅಧ್ಯಾಯ-೨
# ಇತಿಹಾಸ

**ಪೌರಾಣಿಕ ಹಿನ್ನೆಲೆ :** ರಾಜ್ಯದ ಇತಿಹಾಸದಂತೆ ತಾಲೂಕಿನ ಇತಿಹಾಸವೂ ವೈವಿಧ್ಯಮಯವಾಗಿದ್ದು, ನಾಡಿನ ಸಾಂಸ್ಕೃತಿಕ ಚರಿತ್ರೆಗೆ ತನ್ನದೇ ಆದ ಕೊಡುಗೆಯನ್ನು ನೀಡುವಲ್ಲಿ ಯಶಸ್ವಿಯಾಗಿದೆ. ದ್ವಾಪರಯುಗದಲ್ಲಿ ಪಾಂಡವರು ವನವಾಸದಿಂದ ಹಿಂತಿರುಗುವಾಗ ಹೆಗ್ಗಡದೇವನಕೋಟೆ ಮಾರ್ಗವಾಗಿ ಬಂದು, ಕೋಟೆಯ ವರದರಾಜಸ್ವಾಮಿ ದೇವಸ್ಥಾನದಲ್ಲಿ ವಿಶ್ರಾಂತಿ ಪಡೆದರೆಂಬ ಪುರಾಣಕತೆ ಇಲ್ಲಿ ಪ್ರಸಿದ್ಧವಾಗಿದೆ. ವರದರಾಜಸ್ವಾಮಿ ದೇವಸ್ಥಾನವು ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿದ್ದು, ತುಂಬ ಆಕರ್ಷಣೀಯವಾಗಿದೆ. ಪಾಂಡವರು ಇಲ್ಲಿ ತಂಗಿದ್ದರು ಎಂಬ ಐತಿಹ್ಯ ಬಿಟ್ಟರೆ ಇನ್ನಾವ ಪೌರಾಣಿಕ ಅಂಶಗಳೂ ಕಂಡುಬರುವುದಿಲ್ಲ. ಆದರೂ ಪಾಂಡವರು ಇಂದಿನ ಹೆಗ್ಗಡದೇವನಕೋಟೆ ಪ್ರದೇಶವನ್ನೂ ಒಳಗೊಂಡಿದ್ದ ಪುನ್ನಾಟ ಪ್ರದೇಶದಲ್ಲಿ ಸ್ವಲ್ಪಕಾಲ ಇದ್ದರೆಂಬುದಕ್ಕೆ ತಾಲೂಕಿನ ಅನೇಕ ಹಳ್ಳಿಗಳಲ್ಲಿ ಕುಂತಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟು ಪ್ರತಿವರ್ಷ ನವರಾತ್ರಿಯಲ್ಲಿ ಕುಂತಿಪೂಜೆಯನ್ನು ತಿಂಗಳ ಕಾಲ ಆಚರಿಸುತ್ತಾರೆ. ಆ ಸಂದರ್ಭದಲ್ಲಿ ಕುಂತಿದೇವಿಗೆ ಸಂಬಂಧಿಸಿದ ಜನಪದ ಹಾಡುಗಳನ್ನು ಸುಮಂಗಲಿಯರು ಹಾಡುತ್ತಾರೆ.

**ಇತಿಹಾಸಪೂರ್ವ ಕಾಲ :** ಹೆಗ್ಗಡದೇವನ ಕೋಟೆ ತಾಲೂಕಿನಲ್ಲಿ ಇತಿಹಾಸಪೂರ್ವ ಕಾಲಕ್ಕೆ ಸೇರಿದ ಅವಶೇಷಗಳು ಇದುವರೆಗೆ ಪತ್ತೆಯಾಗಿಲ್ಲ. ಆದರೆ ಈ ತಾಲೂಕನ್ನು ಸುತ್ತುವರಿದಿರುವ ಹುಣಸೂರು, ಮೈಸೂರು, ಗುಂಡ್ಲುಪೇಟೆ ಹಾಗೂ ವಿರಾಜಪೇಟೆ ತಾಲೂಕುಗಳಲ್ಲಿ ಶಿಲಾಯುಗ ಮಾನವರ ಅವಶೇಷಗಳು ಸಾಕಷ್ಟು ಪ್ರಮಾಣದಲ್ಲಿ ಪತ್ತೆಯಾಗಿವೆ. ಆದ್ದರಿಂದ ಹೆಗ್ಗಡದೇವನಕೋಟೆ ತಾಲೂಕು ಪ್ರದೇಶವೂ ಶಿಲಾಯುಗದ ಮಾನವರ ನೆಲೆಯಾಗಿರುವ ಸಾಧ್ಯತೆಗಳು ಅಧಿಕವಾಗಿದ್ದು ಇದನ್ನು ವ್ಯವಸ್ಥಿತ ಅಧ್ಯಯನ, ವಿಸ್ತೃತ ಕ್ಷೇತ್ರಕಾರ್ಯದ ಮೂಲಕ ಖಚಿತಪಡಿಸಿಕೊಳ್ಳಬೇಕಾಗಿದೆ.

**ಇತಿಹಾಸ ಕಾಲ :** ತಾಲೂಕಿನ ೬೭ ಹಳ್ಳಿಗಳಲ್ಲಿ ೧೬೦ಕ್ಕೂ ಹೆಚ್ಚು ಶಾಸನಗಳು ಪತ್ತೆಯಾಗಿವೆ. ವಿಸ್ತೃತ ಕ್ಷೇತ್ರಕಾರ್ಯದ ಮೂಲಕ ಉಳಿದ ಗ್ರಾಮಗಳನ್ನೂ ಚಾರಿತ್ರಿಕವಾಗಿ

ಪರಿಶೀಲಿಸಬೇಕಿದೆ. ನೆರೆಯ ನಂಜನಗೂಡು ತಾಲೂಕಿನ ಬಸವನಪುರ ಶಾಸನ ಪುನ್ನಾಟದ ಅರಸರನ್ನು ಹೆಸರಿಸಿದೆ. ಹೆಗ್ಗಡದೇವನಕೋಟೆ ತಾಲೂಕು ಪ್ರದೇಶವನ್ನು ಹಿಂದೆ ಪುನ್ನಾಟ, ಪುನ್ನಾಡು, ಪುಂರಾಷ್ಟ್ರ ಎಂದು ಕರೆಯಲಾಗಿದ್ದು, ಪುನ್ನಾಟದ ಅರಸರು ಈ ಪ್ರದೇಶವನ್ನು ಆಳುತ್ತಿದ್ದರು. ಪುನ್ನಾಟ ಪ್ರದೇಶವನ್ನು ಸುಮಾರು ೭-೧೦ನೇ ಶತಮಾನದಲ್ಲಿ ಗಂಗರು, ೧೧-೧೨ನೇ ಶತಮಾನದಲ್ಲಿ ಬಯಲು ನಾಡಿನ ಕದಂಬರು, ೧೨-೧೪ನೇ ಶತಮಾನದಲ್ಲಿ ಹೊಯ್ಸಳರು, ೧೪-೧೬ನೇ ಶತಮಾನದಲ್ಲಿ ವಿಜಯನಗರದ ಅರಸರು, ೧೭-೧೯ನೇ ಶತಮಾನದಲ್ಲಿ ಮೈಸೂರು ಅರಸರು ಕಾಲಾನುಕ್ರಮವಾಗಿ ಆಡಳಿತ ನಡೆಸಿರುವ ವಿಚಾರ ಶಾಸನಗಳಿಂದ ತಿಳಿದು ಬರುತ್ತದೆ. ಬಹುಹಿಂದಿನಿಂದಲೂ ಈ ಪ್ರದೇಶವು ಧಾರ್ಮಿಕ ಸಾಮರಸ್ಯಕ್ಕೆ ಹೆಸರಾಗಿದ್ದು, ಪುನ್ನಾಟ ನಾಡಿನ ರಾಜಧಾನಿ ಕೀರ್ತಿಪುರ (ಕಿತ್ತೂರು) ಜೈನ ಸಂಘವೊಂದರ ಕೇಂದ್ರವಾಗಿದ್ದು, ಈ ಭಾಗದಿಂದ ಗುಜರಾತ್, ಮುಂತಾದೆಡೆಗೆ ವಲಸೆ ಹೋದ ಜೈನಯತಿಗಳ ಸಂಘವು, 'ಪುನ್ನಾಟ ಸಂಘ' ಎಂದು ಪ್ರಸಿದ್ಧಗೊಂಡವೆಂದು ಹರಿಸೇನ ಹಾಗೂ ಜೀನಾಸೇನಾಚಾರ್ಯರ ಕೃತಿಗಳಿಂದ ವೇದ್ಯವಾಗುತ್ತದೆ. ತಾಲೂಕಿನ ಕಿತ್ತೂರು, ಸರಗೂರು ಮುಂತಾದವು ಹಿಂದೆ ಪ್ರಮುಖ ಜೈನಕೇಂದ್ರಗಳಾಗಿದ್ದವು. ಇಂದಿನ ಕಿತ್ತೂರೇ, ಹಿಂದಿನ ಪುನ್ನಾಟದ ರಾಜಧಾನಿ ಎಂಬ ಅಭಿಪ್ರಾಯವಿದೆ. ಆದರೆ, ನೆರೆಯ ಪಿರಿಯಾಪಟ್ಟಣ ತಾಲೂಕಿನ ಕಿತ್ತೂರೇ ಇದೆಂಬ ಅಭಿಪ್ರಾಯವೂ ವಿದ್ವಾಂಸರಲ್ಲಿದೆ.

**ಪುನ್ನಾಟದ ಅರಸರು** : ಹೆಗ್ಗಡದೇವನಕೋಟೆ ತಾಲೂಕು ಪ್ರದೇಶವು ಪುನ್ನಾಟದ ಅರಸರ ಅಳ್ವಿಕೆಗೆ ಒಳಪಟ್ಟಿದ್ದು, ಆ ದಿನಗಳಲ್ಲಿ ಈ ಪ್ರದೇಶವನ್ನು ಪುನ್ನಾಟ-೬೦೦೦ ಎಂದು ಕರೆಯಲಾಗುತಿತ್ತು. ಈ ಮನೆತನದ ಅರಸರು ಕದಂಬ ಹಾಗೂ ಗಂಗರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು. ಪುನ್ನಾಟ ನಾಡು ಕಾವೇರಿ, ಕಪಿಲ ನದಿಗಳಿಂದ ಶೋಭಿಸುತ್ತಿದ್ದ ಹೊನ್ನಾಡಾಗಿದ್ದು, ಸುಮಾರು ೧೫೦ ವರ್ಷಗಳ ಕಾಲ ಸ್ಥಳೀಯ ಪುನ್ನಾಟ ಅರಸರ ಆಳ್ವಿಕೆಗೆ ಒಳಪಟ್ಟಿದ್ದು, ತಾಲೂಕಿನಲ್ಲಿರುವ ಕೀರ್ತಿಪುರ ಅವರ ರಾಜಧಾನಿಯಾಗಿತ್ತೆಂದು ಹೇಳಲಾಗುತ್ತದೆ. ಅಲ್ಲಿಯ ಗ್ರಾಮಗಳೂ ಶ್ರೀಮಂತವಾಗಿದ್ದವೆಂದು ಮಾಂಬಳ್ಳಿ (೫೫೦) ಶಾಸನ ಉತ್ಪ್ರೇಕ್ಷಿಸಿದರೆ, ಕಪಿನಿ ನದಿಯ ಪೂರ್ವದ ಎಡತೊರೆ ನಾಡಿನೊಳಗಿದ್ದ ಮುಟ್ಟಲ್ಲವ್ವಿಯೂರನ್ನು ದತ್ತಿ ಬಿಟ್ಟ ಅಂಶವನ್ನು ಬಸವನಪುರ (ಸು.೫೫೦) (ನಂ.ತಾ) ಶಾಸನ ದಾಖಲಿಸಿದ್ದು, ಆ ಪ್ರದೇಶವೇ ಪುನ್ನಾಟ ನಾಡೆಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಕ್ರಿ.ಶ. ೫೫೦ರ ಮಾಂಬಳ್ಳಿ ಶಾಸನವೇ ಈ ಅರಸರ ಅತ್ಯಂತ ಪ್ರಾಚೀನ ಶಾಸನವಾಗಿದೆ. ಆದ್ದರಿಂದ ಪುನ್ನಾಟದ ಇತಿಹಾಸ ಆರನೇ ಶತಮಾನದಿಂದ ಪ್ರಾರಂಭವಾಗುತ್ತದೆ. ಅಲ್ಲದೆ ಈ ಭಾಗದ ಶಾಸನಗಳಲ್ಲಿ ನುಗುನಾಡು, ನವಿಲೆ ನಾಡು, ಕಿಳೈನಾಡುಗಳ ಉಲ್ಲೇಖವೂ ಇದೆ. ಈ ಪ್ರದೇಶ ಎಮ್ಮೆ, ಹಸು, ಕುದುರೆ, ರತ್ನಗಂಬಳಿ, ಮಾಣಿಕ್ಯ, ಚಿನ್ನ-ಬೆಳ್ಳಿ, ಮುತ್ತು-ಹವಳಗಳನ್ನು ಹೊಂದಿದ್ದು ಶ್ರೀಮಂತರಿಂದ ತುಂಬಿತ್ತೆಂದು ಶಾಸನದಿಂದ ತಿಳಿದು ಬರುತ್ತದೆ. ಅಲ್ಲದೆ ತಾಲೂಕಿನ ಗ್ರಾಮಗಳು ಕಪಿಲಾ ಮತ್ತಿತರ ಉಪ ನದಿಗಳಿಂದ ಶೋಭಿಸುತ್ತಿದ್ದವೆಂದು ಶಾಸನಗಳಲ್ಲಿ ಹೇಳಲಾಗಿದೆ. ಆದರೆ ಈ ತಾಲೂಕಿನಲ್ಲಿ ಅವರಿಗೆ ಸಂಬಂಧಿಸಿದ ಶಾಸನಗಳು ಈವರೆಗೆ ಪತ್ತೆಯಾಗಿಲ್ಲ. ಈ

ಮನೆತನದ ಮೂಲಪುರುಷನಾದ ತಾಮ್ರ ಕಾಶ್ಯಪನು ತಾಮ್ರದ ಪಾತ್ರೆಯೊಂದರಲ್ಲಿ ಜನಿಸಿದ್ದರಿಂದ ಆ ಹೆಸರು ಪ್ರಾಪ್ತವಾಯಿತೆಂದು ಬಸವನಪುರ ಶಾಸನ ತಿಳಿಸುತ್ತಿದ್ದು, ಮಾಂಬಳ್ಳಿ ಶಾಸನದ ಪ್ರಕಾರ ವಿಷ್ಣುದಾಸ (೪೦೫–೪೩೦)ನ ಮಗ ರಾಷ್ಟ್ರವರ್ಮ (೪೩೦–೪೫೫)ನಿಗೆ ಕದಂಬ ಕಾಕುಸ್ಥವರ್ಮನ ಮಗಳಾದ ಪ್ರಭಾವತಿಯನ್ನು ವಿವಾಹ ಮಾಡಿದ್ದು, ಅವರಿಗೆ ಪೃಥ್ವಿಪತಿ (೪೫೫–೭೦), ಒಂದನೆಯ ಸ್ಕಂದವರ್ಮ (೪೭೦–೮೫ ಇವನ ಪತ್ನಿ ಕದಂಬ ಸಿಂಹವರ್ಮನ ಪುತ್ರಿಯಾಗಿದ್ದಳು) ಹಾಗೂ ನಾಗದತ್ತ (೪೮೫–೫೦೦) ಎಂಬ ಮೂವರು ಪುತ್ರರಿದ್ದು, ಆನಂತರ ನಾಗದತ್ತನ ಮಗ ಭುಜಂಗ (೫೦೦–೫೨೫), ಅವನ ಮಗ ಇಮ್ಮಡಿ ಸ್ಕಂದವರ್ಮರು (೫೨೫–೫೧) ರಾಜ್ಯಭಾರ ನಡೆಸಿದರು. ಇಮ್ಮಡಿ ಸ್ಕಂದವರ್ಮನ ಮಗಳಾದ ಜ್ಯೇಷ್ಠಾದೇವಿಯನ್ನು ಗಂಗ ದೊರೆ ಅವಿನೀತನು ವಿವಾಹವಾಗಿದ್ದು, ಅವಳ ಸೋದರ ರವಿದತ್ತನು ೫೫೦ಕ್ಕೆ ಮೊದಲೇ ನಿಧನ ಹೊಂದಿದ್ದರಿಂದ, ಇಮ್ಮಡಿ ಸ್ಕಂದವರ್ಮನ ಮರಣಾನಂತರ ಪುನ್ನಾಟ ರಾಜ್ಯವು ಅವನ ಮೊಮ್ಮಗನಾದ ದುರ್ವಿನೀತನ ಆಳ್ವಿಕೆಗೆ ಒಳಪಟ್ಟಿತು. ಇದರೊಂದಿಗೆ ಪುನ್ನಾಟದ ಅರಸರ ಆಳ್ವಿಕೆ ಅಂತ್ಯಗೊಂಡರೂ ನಾಡ ಹೆಸರು "ಪುನ್ನಾಟ" ಎಂದೇ ನಂತರದಲ್ಲೂ ಮುಂದುವರಿಯಿತು.

**ತಲಕಾಡಿನ ಗಂಗರು :** ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ನಡೆಸಿದ ಗಂಗರ ಶಾಸನಗಳು ಈ ತಾಲೂಕಿನಲ್ಲೂ ಲಭಿಸಿವೆ. ಅದರಂತೆ ನೇರಲೆಯ ಶಾಸನ ಶ್ರೀಪುರುಷನ ಆಳ್ವಿಕೆಗೆ ಸಂಬಂಧಿಸಿದ ದತ್ತಿ ಶಾಸನವಾಗಿದ್ದರೂ, ವಿವರ ಅಸ್ಪಷ್ಟವಾಗಿದೆ. ಅರಸನನ್ನು ಶ್ರೀ 'ಪಟ್ಟಾಣಿ' ಎರೆಯನ್ ಎಂದು ಹೆಸರಿಸಲಾಗಿದೆ. ಇದೇ ಅರಸನಿಗೆ ಸೇರಿದ ಸರಗೂರು ತಾಮ್ರಶಾಸನ, ಕೆಸುಗೊಳದ ಒಡೆಯ ಬಿಣಮ್ಮನಿಗೆ ಅರಸನು ತನ್ನ ಜನ್ಮ (ಶ್ರೀ)ನಕ್ಷತ್ರ ಸಂದರ್ಭದಲ್ಲಿ ಒಂದು ತಿಂಗಳವರೆಗೆ ೧೨ ಜನ ಬ್ರಾಹ್ಮಣರಿಗೆ ಒಪ್ಪೊತ್ತಿನ ಭೋಜನಕ್ಕಾಗಿ ದಣ್ಣಗವಾಡಿ ಗ್ರಾಮವನ್ನೂ ೧೦ ಗದ್ಯಾಣವನ್ನೂ ಹಾಗೂ ಬ್ರಹ್ಮದೇಯವಾಗಿ ಪೆರ್ವಟ್ಟಿಯೂರು ಹಾಗೂ ಮದ್ದೂರುಗಳನ್ನು ಕೆಸುವೊಳದ ಮಹಾಜನಗಳಿಗೆ ದತ್ತಿಬಿಟ್ಟ ಅಂಶವನ್ನು ದಾಖಲಿಸಿದೆ. ಹೆಬ್ಬಲಗುಪ್ಪೆಯ ಒಂದು ಶಾಸನ, ದುಗ್ಗಮಾರ ನಿರ್ಮಿತ (?) ದುಗ್ಗಮಾರ ಬಸದಿಗೆ ನರಸೀಗೆರೆ ಅಪ್ಪೂರು ಆರು ಖಂಡುಗ ಗದ್ದೆಯನ್ನು ದಾನಬಿಟ್ಟ ಅಂಶವನ್ನು ದಾಖಲಿಸಿದ್ದು, ಶಾಸನೋಕ್ತ ದುಗ್ಗಮಾರ ಶ್ರೀಪುರುಷನ ಮಗನಾಗಿದ್ದು, ತಂದೆಯ ಕಣ್ಣೆದುರೇ ಮರಣವನ್ನಪ್ಪಿದನು.

ತಾಲೂಕಿನ ಮಾಗುಡಿಲು ಶಾಸನ ಒಂದನೇ ಅಥವಾ ಎರಡನೇ ಶಿವಮಾರನ ಆಳ್ವಿಕೆಗೆ ಸೇರಿದ್ದು, ಮರಣಿಸಿದ್ದ ವೇಡಿರೂನನ ಪುಣ್ಯಾರ್ಥವಾಗಿ, ರೂಢಿಯಲ್ಲಿದ್ದ ತೆರಿಗೆ ನೀತಿಯಂತೆ ಭೂತೆರಿಗೆಯನ್ನು ದೇವಾಲಯವೊಂದರ ಭಂಡಾರಿಗೆ ದಾನಬಿಟ್ಟ ಅಂಶವನ್ನು ದಾಖಲಿಸುತ್ತದೆ. ಕಟ್ಟೆಮನುಗನಹಳ್ಳಿಯಲ್ಲಿರುವ, ಸುಮಾರು ೯ನೇ ಶತಮಾನದ ಲಿಪಿಲಕ್ಷಣವನ್ನು ಹೊಂದಿರುವ ನೀತಿಮಾರ್ಗ ಪೆರ್ಮಾಡಿಯ ಕಾಲಕ್ಕೆ ಸೇರಿದ ಶಾಸನ. ಎರೆಯಪ್ಪರಸನು ನುಗುನಾಡು, ನವಲೆನಾಡುಗಳನ್ನು ಆಳುತ್ತಿದ್ದಾಗ ಬಯಲ್ನಾಡವರು ಕೊತ್ತಮಂಗಲದ ಮೇಲೆ ಧಾಳಿಯನ್ನು ಮಾಡಿ ತುರುಗಳನ್ನು ಅಪಹರಿಸಿಕೊಂಡು

ಹೋಗುತ್ತಿದ್ದಾಗ, ಅವರೊಂದಿಗೆ ಪೆರ್ವಯಲ ಕೊಂಗುಣಿ ಹೋರಾಡುತ್ತಿದ್ದಾಗ, ಪೆರ್ಮಾನಡಿಗೌಡನ ಮಗನಾದ ರಾಮನು ಸತ್ತನು. ಅದಕ್ಕಾಗಿ ಪೆರ್ಮ್ಮಾನಡಿಗೌಡನಿಗೆ ಕೊಂಗುಣಿನಾಡ ನಾಡಗೌಡಿಕೆ ಹಾಗೂ ಕಿರುವುಸುವೂರನ್ನು ಕಲ್ನಾಡಾಗಿ ದಾನ ಕೊಟ್ಟ ಅಂಶವನ್ನು ತಿಳಿಸುತ್ತದೆ. ಸುಮಾರು ೯-೧೦ನೆಯ ಶತಮಾನಕ್ಕೆ ಸೇರಿದ ಸತ್ಯವಾಕ್ಯ ಪೆರ್ಮಾನಡಿ ಎರೆಗಂಗನ ಜಿನ್ನಹಳ್ಳಿ ಶಾಸನ, ಅರಸನ ಆಳ್ವಿಕೆಯ ೭ನೆಯ ವರ್ಷದಲ್ಲಿ ಗುತ್ತಿಯ ಗಂಗನ ಆದೇಶದಂತೆ ನೊಳಂಬಾಧಿರಾಜನ ವಿರುದ್ಧ ತುರುಗೋಳ್ ಕದನದಲ್ಲಿ ಹೋರಾಡುತ್ತ ಮಡಿದ ಎರೆಯಂಗಪ್ಪನ ಮಗ ಮಾಚನ ಶೌರ್ಯವನ್ನು ಬಿಂಬಿಸುವ ವೀರಗಲ್ಲಾಗಿದೆ. ಹಿರಿನಂದಿಯಲ್ಲಿರುವ ಸುಮಾರು ಹತ್ತನೆಯ ಶತಮಾನಕ್ಕೆ ಸೇರಿದ ಶಾಸನ, ಎರೆಯಪ್ಪ ನೀತಿಮಾರ್ಗನ ನಿಧನಾನಂತರ ರಾಜ್ಯದ ಅರ್ಥಕೋಶದಲ್ಲಿ ೧/೨ ಭಾಗವನ್ನು ಕಿರಿಯ ರಾಚಮಲ್ಲನಿಂದ ಬಲಾತ್ಕಾರದಿಂದ ಪಡೆಯಲು ಬಯಲ್ನಾಡಿಗೆ ಆಗಮಿಸಿದ್ದ ಇಮ್ಮಡಿ ಬೂತುಗನ ಅಧಿಕಾರಿಯಾದ ಭುವನಾದಿತ್ಯನನ್ನು ಐವರು ಸಾಮಂತರು ಹಾಗೂ ಹೆಗ್ಗಡೆಗಳು ಮಾಗುನ್ದಿಯ ಕಾಳಗದಲ್ಲಿ ವಿರೋಧಿಸಿದಾಗ, ನಂದಿಯ ಕೊರನ್ತಿಯರಸನ ನಾಲ್ವರು ಮಕ್ಕಳು ಮಡಿದರೆಂದು ದಾಖಲಿಸುವ ಮೂಲಕ ಇಮ್ಮಡಿ ಬೂತುಗನ ಅಧಿಕಾರಗ್ರಹಣ ಅಷ್ಟೊಂದು ಸುಲಭದ್ದಾಗಿರಲಿಲ್ಲವೆಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಬೆಳತೂರಿನ (೧೦ನೇ ಶ.) ಶಾಸನದಲ್ಲಿ ಬೂತುಗ ಕೊಂಗುಣಿಯ ಮಡದಿಯು ೧೦ ಖಂಡುಗ ಭೂಮಿಯನ್ನು ಬಿತ್ತುವಟ್ಟವಾಗಿ ನೀಡಿದ್ದನ್ನು ದಾಖಲಿಸಿದೆ.

**ರಾಷ್ಟ್ರಕೂಟರು :** ಗಂಗರ ನಂತರ ರಾಷ್ಟ್ರಕೂಟ ರಾಜಕುಮಾರ ಕಂಬ(ರಸ)ಯ್ಯ ಈ ನಾಡನ್ನು ಆಳಿರುವುದಕ್ಕೆ ಶಾಸನವೊಂದು ದಾಖಲೆ ಒದಗಿಸುತ್ತದೆ. ಮಟಕೆರೆಗೆ ದಕ್ಷಿಣಕ್ಕಿರುವ ಬಪ್ಪನಹಳ್ಳಿಯ ಶಾಸನದಿಂದ ರಾಷ್ಟ್ರಕೂಟ ಕಂಬರಸನು ಗಂಗವಾಡಿ ೯೬,೦೦೦ವನ್ನೂ ಹಾಗೂ ಮಾದಿಮರಸ(?)ನೆಂಬ ಮತ್ತೊಬ್ಬ, ತೊರೆನಾಡು-೫೦೦ ಪ್ರದೇಶವನ್ನೂ ಆಳಿರುವುದು ತಿಳಿದುಬರುತ್ತದೆ. ಕಂಬರಸನು ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಗೋವಿಂದನ ಸೋದರನಾಗಿದ್ದು, ಪ್ರಾಂತಾಧಿಪತಿಯಾಗಿ ತಲಕಾಡಿನಿಂದ ಆಡಳಿತ ನಡೆಸುತ್ತಿದ್ದ ಅಂಶ ಇದರಿಂದ ಸ್ಪಷ್ಟವಾಗುತ್ತದೆ.

**ಬಯಲ್ನಾಡು ಕದಂಬರು:** ಸುಮಾರು ೧೦-೧೨ನೇ ಶತಮಾನದ ಪೂರ್ವಾರ್ಧ ಭಾಗದವರೆಗೆ ಬಯಲ್ನಾಡು-೩೦೦ ಪ್ರಾಂತದಲ್ಲಿ ರಾಜ್ಯಭಾರ ನಡೆಸಿದ ಬಯಲ್ನಾಡ ಕದಂಬರ ಐದು ಶಾಸನಗಳಲ್ಲಿ ನಾಲ್ಕು ವೀರಗಲ್ಲುಗಳಾಗಿದ್ದು ತಾಲೂಕಿನ ಮಳಲಿ, ಮಗ್ಗೆ (೯೯೯), ಕಿತ್ತೂರು(೧೦೭೯) ಸೋಗಳ್ಳಿ (೧೧೧೦೭) ಹಾಗೂ ನರಸೀಪುರ (೧೧೩೭)ಗಳಲ್ಲಿ ಲಭಿಸಿವೆ. ಇವುಗಳ ನೆರವಿನಿಂದ ಚಾಗಿ, ರವಿಯಮ್ಮರಸ, ಬೀರ ಈಶ(ಶ್ವ)ರವರ್ಮ, ರವಿಚಲ್ಲಮರೆಂಬ ಬಯಲ್ನಾಡ ಕದಂಬ ಅರಸರನ್ನು ಹೆಸರಿಸಬಹುದಾಗಿದೆ. ಆದರೆ, ಮುಂಜರಾಬಾದಿನ (ಹಾಸನ ಜಿಲ್ಲೆ) ೧೦೯೫ರ ಶಾಸನ ಜಯಸಿಂಹನೃಪನಿಗೆ ಸಂಬಂಧಿಸಿದ್ದು, ಆತನ ಹಿರಿಯ ಸೋದರ ಮತ್ತು ತಾತ ಇಬ್ಬರಿಗೂ ಚಾಗಿಮಹಾರಾಜ ಎಂದಿರುವುದು ಉಲ್ಲೇಖಾರ್ಹವಾಗಿದೆ. ತಾಲೂಕಿನಲ್ಲಿ ಲಭ್ಯವಿರುವ ಶಾಸನಗಳಲ್ಲಿ ಕಿತ್ತೂರಿನ ೧೦೭೯ರ ಶಾಸನದಿಂದ, ಬನವಾಸಿ ಕದಂಬರ

ಬಿರುದಾವಳಿಗಳನ್ನು ಹೊಂದಿದ್ದ ರವಿವರ್ಮನು ಬಯಲ್ನಾಡು-೩೦೦ ಮುಂತಾದವನ್ನು ಆಳುತ್ತಿದ್ದಾಗ, ಕಿತ್ತೂರ ರವಿಯಮ್ಮೇಶ್ವರ ದೇವರ್ಗೆಂದು ಬೂದವಾಡಿ, ತೇರುಮಂಗಲ, ಕೇರಳ, ಪುನ್ನಾಡ, ನಿಡುಳೆ ಹಾಗೂ ಕಿಕ್ಕಿನಾಡ ಅಧಿಕಾರಿಗಳು ದಾನಬಿಟ್ಟ ಅಂಶವನ್ನು ತಿಳಿಸುವುದರ ಜೊತೆಗೆ ಹಿಂದೆ ಕಿತ್ತೂರು-೧೨ ಗ್ರಾಮಗಳ ಆಡಳಿತ ಕೇಂದ್ರವಾಗಿದ್ದ ಅಂಶವನ್ನೂ ದಾಖಲಿಸಿದೆ. ನೆರೆಯ ನರಸೀಪುರದ ೧೧೩೭ರ ಶಾಸನದಿಂದ ಹೆಗ್ಗವಾಡಿಯ ಬಮ್ಮಗಾವುಂಡನ ಮಗ ಬೀಚಗೌಡನು ಸರಗೂರ ಕೊಡನಹಳ್ಳಿಯ ತುರು ಹಾಗೂ ಮಾನಿನಿಯರನ್ನು ರಕ್ಷಿಸಲು ಕಳ್ಳರೊಡನೆ ಹೋರಾಡುತ್ತಾ ಮಡಿದಾಗ ವೀರಣ್ಣನು ಈ ವೀರಗಲ್ಲನ್ನು ನಿಲ್ಲಿಸಿದ ಅಂಶ ಗೊತ್ತಾಗುತ್ತದೆ.

**ಚೋಳರು** : ತಮಿಳುನಾಡಿನಿಂದ ರಾಜ್ಯಭಾರವನ್ನಾರಂಭಿಸಿದ ಚೋಳರು, ಗಂಗರನ್ನು ಸೋಲಿಸಿ ಗಂಗವಾಡಿ-೯೬೦೦೦ವನ್ನು ವಶಪಡಿಸಿಕೊಂಡು ತಲಕಾಡನ್ನು ಪ್ರಾಂತೀಯ ಕೇಂದ್ರವನ್ನಾಗಿ ಮಾಡಿಕೊಂಡು ಸುಮಾರು ೧೦೦ ವರ್ಷ ಆಳ್ವಿಕೆ ನಡೆಸಿದರು. ಚೋಳರಿಗೆ ಸಂಬಂಧಪಟ್ಟ ಒಂಭತ್ತು ಶಾಸನಗಳು ಈವರೆಗೆ ತಾಲೂಕಿನಲ್ಲಿ ಲಭಿಸಿದ್ದು ಅವುಗಳಿಂದ ಚೋಳರು ನುಗುನಾಡಿನಲ್ಲಿ ೧೧-೧೨ನೆಯ ಶತಮಾನದವರೆಗೆ ಆಡಳಿತ ನಡೆಸಿದರೆಂದು ತಿಳಿದು ಬರುತ್ತದೆ.ಬೆಳತೂರಿನ ಬಾಣೇಶ್ವರ ಗುಡಿಯ ಬಳಿಯಲ್ಲಿರುವ ಶಾಸನ ಕ್ರಿ.ಶ. ೧೦೨೦ಕ್ಕೆ ಸೇರಿದ್ದು, ರಾಜೇಂದ್ರ ಚೋಳನ ಆಡಳಿತಕ್ಕೆ ನುಗುನಾಡು ಸೇರಿದ್ದು, ಈ ಶಾಸನದಲ್ಲಿ ಮಳ್ತ(ಠ) ಕೆರೆಯ ಉಲ್ಲೇಖವೂ ಇದೆ.

ಇದೇ ಅರಸನ ಆಳ್ವಿಕೆಗೆ ಸೇರಿದ ಇನ್ನೂ ನಾಲ್ಕು ಶಾಸನಗಳು ತಾಲೂಕಿನ ಮಲ್ಲಿಯೂರು (೧೦೨೩) ಲಕ್ಷ್ಮಣಾಪುರ (೧೦೫೦) ಬೆಳತೂರು (೧೦೩೩) ಹಾಗೂ ಅಂಕನಾಥಪುರ (೧೦೩೭)ಗಳಲ್ಲಿ ಲಭಿಸಿವೆ. ಅವುಗಳಲ್ಲಿ ಅಂಕನಾಥಪುರದ ಶಾಸನ, ನವಿಲೆನಾಡನ್ನು ಕೂಡಲೂರ ಚೆಂಗಾಳ್ವನು ಧಾಳಿ ಮಾಡಿದಾಗ, ನಾಗಮಂಗಲವನ್ನು ಕಲ್ನಾಡಾಗಿ ಅನೇಕ ಗೌಡರು ದತ್ತಿ ಪಡೆದ ಅಂಶವನ್ನು ದಾಖಲಿಸಿದೆ. ಇವನ ನಂತರ ಅಧಿಕಾರಕ್ಕೆ ಬಂದ ಒಂದನೆಯ ರಾಜಾಧಿರಾಜನ ಕೊಳಗಾಲ (೧೦೫೩) ಶಾಸನ, ನವಲೆನಾಡ ಕೋಳಿಗಾಲದ ಉತ್ತಮಚೋಳಗೌಡನ ಮಗ ರಾಚಯ್ಯನು ಗಂಗೇಶ್ವರ ದೇವಾಲಯವನ್ನು ನಿರ್ಮಿಸಿ, ತವುಡನಹಳ್ಳಿಯ ಕೆರೆ ಕೆಳಗಿನ ಗದ್ದೆ ಹಾಗೂ ಗಾಣವನ್ನು ದಾನ ಬಿಟ್ಟ ಅಂಶವನ್ನು ತಿಳಿಸುತ್ತದೆ. ಇವನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ರಾಜೇಂದ್ರ ಚೋಳನ ಎರಡು ಶಾಸನಗಳು ತಾಲೂಕಿನಲ್ಲಿ ಲಭಿಸಿವೆ. ಅವುಗಳಲ್ಲಿ ಬೆಳತೂರು ಮಾಸ್ತಿಕಲ್ಲು ಶಾಸನದ ಕಾಲ ೧೦೫೭. ಇದು ಏಚನ ಪತ್ನಿಯಾದ ದೇಕಬ್ಬೆಯ ಮರಣ ವೃತ್ತಾಂತವನ್ನು ತಿಳಿಸುವ ಉತ್ತಮ ಕಾವ್ಯಾತ್ಮಕ ರಚನೆಯಾಗಿದೆ. ಇಲ್ಲಿ ಆಕೆಯ ತಂದೆ ತಾಯಿಗಳ ವಂಶಾವಳಿ ಇದೆ. ಆಕೆಯ ತಂದೆ ರವಿಗ ನುಗು ನಾಡಿನ ಅಧಿಕಾರಿ. ತಾಯಿ ಪೊನ್ನಕ್ಕ ಎಡೆನಾಡಿನ ಅಧಿಪತಿಯಾಗಿದ್ದ ನಾಡೋಜನ ಮಗಳು. ನವಿಲೆನಾಡ ಅಧಿಕಾರಿಯಾಗಿದ್ದ ಅವಳ ಪತಿ ಏಚನು, ದಾಯಾದಿಗಳನ್ನು ಇರಿದು ಬಂಧನಕ್ಕೊಳಗಾದಾಗ ಅವನನ್ನು ತಲಕಾಡಿಗೆ ಕೊಂಡ್ಯೋಯ್ದು ಮರಣ ಶಿಕ್ಷೆಯನ್ನು ವಿಧಿಸಲಾಯಿತು. ಇದರಿಂದ ನೊಂದ ದೇಕಬ್ಬೆ ಸಂಪ್ರದಾಯದಂತೆ

ಸತಿಯಾಗಲು ನಿರ್ಧರಿಸಿದಾಗ ಮಾತಾಪಿತೃ ಹಾಗೂ ಸಂಬಂಧಿಕರು ಅವಳನ್ನು ತಡೆಯಲೆತ್ನಿಸಿದಾಗ ನುಗುನಾಡಿನ ಅಧಿಕಾರಿಯ ಮಗಳು, ನವಿಲೆನಾಡಿನ ಅಧಿಕಾರಿಯ ಪತ್ನಿಯೂ ಆದ ತಾನು ಇದಕ್ಕೆ ಹಿಂಜರಿಯುವುದಿಲ್ಲವೆಂದು ಹೇಳಿ ಚಿತೆಯೇರಿ ಸತಿಯಾಗುತ್ತಾಳೆ. ಆ ಸಂದರ್ಭದಲ್ಲಿ ಆಕೆಯು ದೇವರ ನೈವೇದ್ಯ, ನಂದಾದೀಪಗಳಿಗಾಗಿ ಭೂಮಿ ಮತ್ತು ತೋಟವನ್ನು ದಾನವಾಗಿ ಕೊಟ್ಟು ಪ್ರಾಣ ತ್ಯಜಿಸಿದ ಹೃದಯವಿದ್ರಾವಕ ಚಿತ್ರಣ ಈ ಶಾಸನದಲ್ಲಿದ್ದು, ಇದೊಂದು ಅಪೂರ್ವ ದಾಖಲೆಯಾಗಿದೆ. ಇತ್ತೀಚೆಗೆ ಇದಕ್ಕೆ ಪೂರಕವಾಗಿ ದೊರೆತಿರುವ ದೇಕಬ್ಬೆಯ ಮಾಸ್ತಿಶಿಲ್ಪವನ್ನು ಸಂಶೋಧಕರು ಸಂಶೋಧಿಸಿ ಪ್ರಕಟಿಸಿದ್ದಾರೆ. ಇದೇ ಚೋಳ ಅರಸನಿಗೆ ಸೇರಿದ ೧೦೬೩ರ ಗುಜ್ಜಪ್ಪನಹುಂಡಿ ವೀರಗಲ್ಲು ಶಾಸನ, ಚೋಳರು ಚಾಲುಕ್ಯ ಆಹವಮಲ್ಲನ ಮೇಲೆ ಪಡೆದ ಗೆಲುವನ್ನೂ, ಕೊಲ್ಲಾಪುರದಲ್ಲಿ ಜಯಸ್ತಂಭವನ್ನೂ ಸ್ಥಾಪಿಸಿದ ಅಂಶವನ್ನೂ ಹೇಳುತ್ತದೆ. ಮಿಗಿಲಾಗಿ ನವಿಲೆನಾಡ ಕೊಳಿಗಾಲದ ಸಂಗಯ್ಯಪ್ರಭುವನ್ನು ದ್ವೇಷದಿಂದ ಕೊಂದ ಕೆರೆಯೂರ ನಾಗಣ್ಣನನ್ನು ರಾಚಗೌಡನು ಕೊಂದಾಗ, ಗಂಗಗೌಡನ ಮಗ ರಾಚಗೌಡನು ವೀರಗಲ್ಲನ್ನು ಹಾಕಿಸಿ ಭೂಮಿಯನ್ನು ದಾನ ಬಿಟ್ಟ ಅಂಶವನ್ನು ದಾಖಲಿಸಿದೆ. ವೀರರಾಜೇಂದ್ರ ಚೋಳನ ಆಳ್ವಿಕೆಗೆ ಸೇರಿದ ನಿಂಗಹಳ್ಳಿಯ ೧೦೭೦ರ ವೀರಗಲ್ಲು ಶಾಸನ ಬಯನಾಡ ಹರವಿನಲ್ಲಿ ಕಳ್ಳರೊಂದಿಗೆ ಹೋರಾಡುತ್ತಾ ಮಡಿದ ಬೀರನ ಶೌರ್ಯವನ್ನು ಉಲ್ಲೇಖಿಸುತ್ತದೆ. ಇವನ ನಂತರ ಅಧಿಕಾರಕ್ಕೆ ಬಂದ ಒಂದನೇ ಕುಲೋತ್ತುಂಗನ ಆಳ್ವಿಕೆಗೆ ಸೇರಿದ ಮೂರು ಶಾಸನಗಳು ತಾಲೂಕಿನಲ್ಲಿವೆ. ಅವುಗಳಲ್ಲಿ ಹೆಬ್ಬಲಗುಪ್ಪೆ (೧೦೮೯)ಶಾಸನ, ನವಿಲೆನಾಡ ಗೌಡ, ಪೆರ್ವ್ವಯಲ ಅಳಗಿಯ ಚೋಳನು, ತನ್ನ ಗತಿಸಿದ ಮಗ ನವಲಾಷಿರಾಜ ಹಾಗೂ ಸೊಸೆಗಾಗಿ ಈ ಕಲ್ಲನ್ನು ಹಾಕಿಸಿ, ೧೦೦ ಘಟ್ಟಮಣ್ಣು ಹಾಗೂ ಕೊಂಗುಣಿಕೆರೆ ಕೆಳಗೆ ೧೦ ಕೊಳಗ ಬೆದ್ದಲು ನಿರ್ಮಣ್ಣಿ ಭೂಮಿಯನ್ನು ದಾನ ಬಿಟ್ಟ ಅಂಶವನ್ನು ತಿಳಿಸಿದರೆ, ಅಣ್ಣೂರಿನ ೧೧೧೬ರ ಶಾಸನ, ತುರುಗೊಳದಲ್ಲಿ ಮಡಿದ ವೀರನಿಗಾಗಿ ಚೋಳಗೌಡನು ವೀರಗಲ್ಲು ಹಾಕಿಸಿದ ಅಂಶವನ್ನು ದಾಖಲಿಸಿದೆ. ಚೋಳರ ಆಳ್ವಿಕೆಗೆ ಸೇರಿದ ಇನ್ನೂ ಕೆಲವು ಶಾಸನಗಳು ತಾಲೂಕಿನಲ್ಲಿ ಲಭಿಸಿದ್ದರೂ, ಅವುಗಳಲ್ಲಿ ಆಳರಸರ ಉಲ್ಲೇಖ ಕಂಡು ಬರುವುದಿಲ್ಲ.

**ಹೊಯ್ಸಳರು :** ಈ ಪ್ರದೇಶದಲ್ಲಿ ಹೊಯ್ಸಳರು ಸುಮಾರು ೧೨ನೇ ಶತಮಾನದಿಂದ ೧೪ನೇ ಶತಮಾನದ ಆದಿಭಾಗದವರೆಗೆ ಆಡಳಿತ ನಡೆಸಿದ್ದು, ಹೊಯ್ಸಳ ಶಾಸನಗಳಲ್ಲಿಯೂ ಈ ಪ್ರದೇಶವನ್ನು 'ನುಗುನಾಡು' ಎಂದೇ ಕರೆಯಲಾಗಿದೆ. ಹೊಯ್ಸಳರ ದೊರೆಗಳಾದ ಇಮ್ಮಡಿ ಬಲ್ಲಾಳ, ಸೋಮೇಶ್ವರ, ಮುಮ್ಮಡಿ ನರಸಿಂಹ ಹಾಗೂ ಮುಮ್ಮಡಿ ಬಲ್ಲಾಳರ ಶಾಸನಗಳು ತಾಲೂಕಿನಲ್ಲಿ ಲಭಿಸಿವೆ. ಇಮ್ಮಡಿ ಬಲ್ಲಾಳನ ಮೂರು ಶಾಸನಗಳು ತಾಲೂಕಿನ ಕಳ್ಳಂಬಾಳು (೧೨೧೧) ಹಾಗೂ ಕುಂದೂರು (೧೨೧೧ ಮತ್ತು ೧೨೧೮) ಗಳಲ್ಲಿವೆ. ಈ ಶಾಸನಗಳು ನುಗುನಾಡಿನ ಕಳ್ಳಂಬಾಳ ಕಲಿಯುಗ ಕಾಮೇಶ್ವರ ದೇವರ ಸೇವೆಗೆಂದು ಹದಿನಾಲ್ಕು ನಾಡ ಪ್ರಭುಗೌಂಡನಾದ ಗೋವಿಂದಮ್ಮಯನ ತಮ್ಮನಾದ ಮಾಚಯ್ಯ ದಂಡನಾಯಕನು ಎಲ್ಲರ ಒಪ್ಪಿಗೆಯೊಂದಿಗೆ ಕುಂದೂರು ಗ್ರಾಮವನ್ನು

ದೇವದಾನವಾಗಿ ದತ್ತಿ ಬಿಟ್ಟ ಅಂಶವನ್ನು ದಾಖಲಿಸುತ್ತಿದೆ. ಹೊಯ್ಸಳ ಸೋಮೇಶ್ವರನ ಆಳ್ವಿಕೆಗೆ ಸೇರಿದ ಹೊಮ್ಮರಹಳ್ಳಿಯ ೧೨೫೩ರ ಶಾಸನ ಬಹಳ ಹಾಳಾಗಿದ್ದರೆ, ಬೆಳತೂರಿನ ೧೨೫೫ರ ಇನ್ನೊಂದು ಶಾಸನ ಅರಸನು ಕಣ್ಣಾನೂರಿನಿಂದ ಆಳುತ್ತಿದ್ದಾಗ, ಅಲ್ಲಾಳದೇವ ದಂಡನಾಯಕನ ಅಧೀನ ನಾಯಕರು ಅಧಿಕಾರ ನಡೆಸುತ್ತಿದ್ದಾಗ, ಬೆಳತೂರಿನಲ್ಲಿ ತನ್ನ ತಂದೆ ಮಾಡಿಸಿದ್ದ ಮಲ್ಲಿಕಾರ್ಜುನ-ಬಾಣೇಶ್ವರ ದೇವಾಲಯದ ಪೂಜೆಗೆಂದು ಮಲ್ಲಾಡಯ್ಯನು ೨೦ ಹೊನ್ನುಗಳನ್ನು ಪುದುವಟ್ಟಾಗಿ ನೀಡಿದ ಅಂಶವನ್ನು ದಾಖಲಿಸುತ್ತದೆ. ಮುಮ್ಮಡಿ ನರಸಿಂಹನ ಕಾಲಕ್ಕೆ ಸೇರಿದ ಮಲೆಯೂರಿನ ೧೨೭೭ರ ಶಾಸನ ತ್ರುಟಿತಗೊಂಡಿದ್ದು, ಸೋವಿದೇವ, ಮಾಚಿದೇವರ ಜೊತೆಗೆ ಸರಗೂರಿನ ಅಗ್ನಿಹೋತ್ರರ ಬಗೆಗೂ ಉಲ್ಲೇಖಿಸುತ್ತದೆ. ಇದೇ ಅರಸನ ಆಳ್ವಿಕೆಗೆ ಸೇರಿದ ಬೆಳತೂರಿನ ತೇದಿರಹಿತ ಶಾಸನದಿಂದ ನುಗುನಾಡ ವಿವಿಧ ಗ್ರಾಮದ ಗೌಡಗಳು ಬೆಳತೂರಿನ ಬಾಣೇಶ್ವರ ದೇವಾಲಯುವನ್ನು ವಿಸ್ತಾರಗೊಳಿಸಿ ಸೋತೆ-ಸುಣ್ಣ-ಇಟ್ಟಿಗೆ-ಮರಗೆಲಸಗಳ ನಿರ್ವಹಣೆಗೆಂದು ೬೦ ಗದ್ಯಾಣ ಹಾಗೂ ೪೦೦ ಸಲಗೆ ಬತ್ತವನ್ನು ದಾನ ಬಿಟ್ಟ ಅಂಶ ಗೊತ್ತಾಗುತ್ತದೆ. ಮುಮ್ಮಡಿ ಬಲ್ಲಾಳನ ಆಳ್ವಿಕೆಗೆ ಸೇರಿದ ಬೆಳತೂರಿನ ಶಾಸನ ಬಹಳ ಹಾಳಾಗಿದ್ದರೆ, ಬಪ್ಪನಹಳ್ಳಿಯ ೧೩೨೭ರ ಶಾಸನ, ಕಣೆಯಾಳದ ಪೆರುಮಾಳೆದೇವರ ಮಗ ಹೆಗ್ಗಡೆದೇವನು ಬಪ್ಪನಹಳ್ಳಿಯನ್ನು 'ಪೆರುಮಾಳೆಪುರ' ಅಗ್ರಹಾರವನ್ನಾಗಿ ಮಾಡಿ ೨೬ ವೃತ್ತಿಗಳನ್ನಾಗಿ ವಿಭಜಿಸಿ, ಅಲ್ಲಿಯ ಗೋಪಿನಾಥ ದೇವಾಲಯ ಹಾಗೂ ವಿವಿಧ ಬ್ರಾಹ್ಮಣರಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸಿದೆ.

**ವಿಜಯನಗರ:** ಹೊಯ್ಸಳರ ನಂತರ ಈ ಪ್ರದೇಶದ ಮೇಲೆ ವಿಜಯನಗರದ ಅರಸರು ಸುಮಾರು ಮೂರು ಶತಮಾನಗಳ ಕಾಲ ಅಧಿಕಾರಿಗಳ ನೆರವಿನೊಂದಿಗೆ ಆಡಳಿತ ನಡೆಸಿದ್ದು, ಅವರಿಗೆ ಸಂಬಂಧಿಸಿದ ೧೧ ಶಾಸನಗಳು ತಾಲೂಕಿನ ವಿವಿಧ ಕಡೆ ದೊರಕಿವೆ. ವಿಜಯನಗರದ ಅರಸರಾದ ಇಮ್ಮಡಿ ಹರಿಹರ, ಮುಮ್ಮಡಿ ಬುಕ್ಕರಾಯ, ಇಮ್ಮಡಿ ದೇವರಾಯ, ಇಮ್ಮಡಿ ಸಾಳುವ ನರಸಿಂಹ, ನರಸಣ್ಣನಾಯಕ, ಕೃಷ್ಣದೇವರಾಯ ಹಾಗೂ ಅಚ್ಯುತರಾಯರು ೧೬ನೆಯ ಶತಮಾನದ ಮಧ್ಯಭಾಗದವರೆಗೆ ಆಡಳಿತ ನಡೆಸಿದರು. ಇಮ್ಮಡಿ ಹರಿಹರನ ಆಳ್ವಿಕೆಯನ್ನು ಉಲ್ಲೇಖಿಸುವ ೧೩೮೦ರ ಸಾಗರೆ ತಾಮ್ರಶಾಸನ ಮಾಧವರಾಜನ ಕೋರಿಕೆಯಂತೆ ಇಮ್ಮಡಿ ಹರಿಹರನು ಬಯನಾಡಿನ ಕಪಿಲ ತೀರದ ಸಾಗರ ಗ್ರಾಮವನ್ನು ವಿಭುಧೇಂದ್ರ ಸರಸ್ವತಿಗಳಿಗೆ ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತದೆ. ಆದರೆ ಇದು ಕೂಟ ಶಾಸನವೆಂಬ ಅನುಮಾನ ವಿದ್ವಾಂಸರಲ್ಲಿದೆ. ಮೂರನೆಯ ಬುಕ್ಕರಾಯನ ಕಾಲಕ್ಕೆ ಸೇರಿದ ೧೪೨೩ರ ಸರಗೂರು ಶಾಸನದಿಂದ ಮಸಣೆಯಹಳ್ಳಿಯ ಈಪಣಗೌಡನು ತನ್ನ ಶ್ರೇಯೋಭಿವೃದ್ಧಿಗಾಗಿ ಬೆಳಗೊಳದ ಗುಂಮಟನಾಥನ ಸೇವೆಗೆಂದು ಬಯನಾಡೊಳಗಣ ತೋಟಹಳ್ಳಿ ಗ್ರಾಮವನ್ನು ಗುಂಮ್ಮಟಪುರವನ್ನಾಗಿಸಿ ದಾನ ಬಿಟ್ಟ ಅಂಶವನ್ನು ದಾಖಲಿಸುತ್ತದೆ. ಮನುಗನಹಳ್ಳಿಯ ಶಾಸನದಲ್ಲಿ ಇಮ್ಮಡಿ ದೇವರಾಯ ಹಾಗೂ ಮನುಗನಹಳ್ಳಿಯ ಉಲ್ಲೇಖವಷ್ಟೇ ಇದ್ದು, ಉಳಿದ ಭಾಗ ಹಾಳಾಗಿದೆ. ಸಾಳುವ ಇಮ್ಮಡಿ ನರಸಿಂಹನು ಸರಗೂರು ತಾಮ್ರಶಾಸನವನ್ನು (ಚಾಕೇನಹಳ್ಳಿ)

೧೪೯೩ರಲ್ಲಿ ನೀಡಿದ್ದು, ಕೆರೆಯೊಂದನ್ನು ನಿರ್ಮಿಸಿ, ದೇವಸಮುದ್ರ ಎಂಬ ಅಗ್ರಹಾರವನ್ನು ರೂಪಿಸಿ ೪೦ ಮಂದಿ ಬ್ರಾಹ್ಮಣರಿಗೆ ದತ್ತಿ ಬಿಟ್ಟ ಅಂಶವನ್ನು ತಿಳಿಸುತ್ತಾದರೂ, ದತ್ತಿ ಬಿಟ್ಟ ಗ್ರಾಮಕ್ಕೂ ತಾಲೂಕಿಗೂ ಯಾವುದೇ ನೇರ ಸಂಬಂಧವಿಲ್ಲ. ಉಯ್ಯಂಬಳ್ಳಿಯ ೧೪೯೭ರ ಶಾಸನ, ಸಾಳುವ ನರಸಿಂಹನ ಪ್ರಧಾನ ತಿಪ್ಪರಸನು ಕಿತ್ತೂರ ರಾಮದೇವರ ಸೇವೆಗೆಂದು ಉಯ್ಯಂಬಳಿಯನ್ನು ದತ್ತಿಬಿಟ್ಟ ಅಂಶವನ್ನು ದಾಖಲಿಸಿದೆ. ಮಗ್ಗೆಯ (೧೪೯೭) ಇನ್ನೊಂದು ಶಾಸನ, ಮಗ್ಗೆಯ ಬಾಣೇಶ್ವರ ದೇವರ ಸೇವೆಗೆಂದು ಬಯನಾಡೊಳಗಣ ಹುಲಿಕಲ್ಲನ್ನು ತಿಪ್ಪರಸನು ದತ್ತಿ ಬಿಟ್ಟದ್ದನ್ನು ಉಲ್ಲೇಖಿಸುತ್ತದೆ. ನರಸಣ್ಣನಾಯಕನ ಸೂಚನೆಯಂತೆ ಸಾಗರೆ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿಸಿ, ಚತುರ್ವೇದಿಮಂಗಲದ ಬ್ರಾಹ್ಮಣರಿಗೆ ಸಾಗರೆ ಹಾಗೂ ಬೀಚನಹಳ್ಳಿ ಗ್ರಾಮಗಳನ್ನು ಮಹಾಜನಗಳಿಗೆ ಅದೇ ತಿಪ್ಪರಸನು ಉಂಬಳಿ ನೀಡಿದ್ದನ್ನು ಸಾಗರೆಯ ೧೪೯೯ರ ಶಾಸನ ದಾಖಲಿಸಿದೆ. ಕೃಷ್ಣದೇವರಾಯನ ಕಾಲಕ್ಕೆ ಸೇರಿದ ಸೋಗಳ್ಳಿಯ ೧೫೨೨ರ ಶಾಸನ, ಚಕ್ರವರ್ತಿಗೆ ಧರ್ಮವಾಗಲೆಂದು ಪ್ರಧಾನ ಬಸವಪ್ಪಯ್ಯನು, ಕೋಟೆಸೀಮೆಗೆ ಸೇರಿದ ಬಯನಾಡ ಸ್ಥಳಕ್ಕೆ ಸೇರಿದ ಸೋಗಹಳ್ಳಿಯನ್ನು ಮಟಕೆರೆಯ ರಾಮೇಶ್ವರ ದೇವರಿಗೆ ದತ್ತಿ ಬಿಟ್ಟಿದ್ದನ್ನು ತಿಳಿಸಿದರೆ, ಮಸಣಿಹಳ್ಳಿಯ ೧೫೨೭ರ ಶಾಸನ, ಕೃಷ್ಣದೇವರಾಯನ ದಕ್ಷಿಣ ಭುಜಸ್ಥಾನದಂತಿದ್ದ ಕೃಷ್ಣರಾಯನಾಯಕನು ಹುರದ ಮಾಧವನಾಯಕನಿಗೆ ಮಸಣಿಹಳ್ಳಿ ಹಾಗೂ ಅದರ ಕಾಲುವಳಿಯಾದ ದೇವರಾಯಪುರಗಳನ್ನು ಸರ್ವಮಾನ್ಯವಾಗಿ ಉಂಬಳಿ ನೀಡಿದ ಅಂಶವನ್ನು ದಾಖಲಿಸಿದೆ. ಕೃಷ್ಣದೇವರಾಯನ ನಂತರ ಅಧಿಕಾರಕ್ಕೆ ಬಂದ ಅಚ್ಯುತರಾಯನ ಆಳ್ವಿಕೆಗೆ ಸೇರಿದ ೧೪೫೩ರ ಕೊತ್ತಾಗಾಲ ಶಾಸನ,ಹುರದ ಮಾಧವನಾಯಕರಿಗೆ ಸಿಂಮ್ಮಣ್ಣ ನಾಯಕರು ಕೊತ್ತೆಗಾಲ, ಮಲೆಯೂರು ಗ್ರಾಮಗಳನ್ನು ಸರ್ವಮಾನ್ಯವಾಗಿ ಉಂಬಳಿ ನೀಡಿದ್ದನ್ನು ತಿಳಿಸಿದರೆ, ನಲ್ಲೂರಿನ (ಬೇಚಿರಾಕ್) ೧೫೩೨ರ ಶಾಸನ ಇದೇ ಮಾಧವನಾಯಕನಿಗೆ ನಲ್ಲೂರನ್ನು ಉಂಬಳಿ ಬಿಟ್ಟಿದ್ದನ್ನು ದಾಖಲಿಸುತ್ತದೆ. ಇವನ ನಂತರದ ವಿಜಯನಗರದರಸರ ಕಾಲದ ಶಾಸನಗಳು ತಾಲೂಕಿನಲ್ಲಿ ಪತ್ತೆಯಾಗಿಲ್ಲ.

**ಉಮ್ಮತ್ತೂರಿನ ಪಾಳೇಗಾರ**ರಿಗೆ ಸೇರಿದ ಮಲಿಯೂರು (೧೫೦೪) ಶಾಸನ ನೀಲಗಿರಿ ನಾಡನ್ನಾಳುತ್ತಿದ್ದ ದೇವರಾಜವೊಡೆಯನನ್ನು ಉಲ್ಲೇಖಿಸುತ್ತದೆ. ಹೆಗ್ಗನೂರಿನ ೧೫೦೫ರ ಶಾಸನ ಚೆನ್ನರಾಯ ಒಡೆಯನನ್ನು ಹೆಸರಿಸುತ್ತದೆ.

**ಮೈಸೂರು ಅರಸರು :** ವಿಜಯನಗರೋತ್ತರ ಕಾಲದಲ್ಲಿ ಮೈಸೂರು ಅರಸರು ನುಗುನಾಡಿನ ಆಡಳಿತವನ್ನು ಹೊಂದಿದ್ದು, ಈ ಅರಸರಿಗೆ ಸಂಬಂಧಿಸಿದ ಒಂಭತ್ತು ಶಾಸನಗಳು ತಾಲೂಕಿನಲ್ಲಿ ಸಿಕ್ಕಿವೆ. ಹೆಗ್ಗಡದೇವನಕೋಟೆಯ ಮುಳ್ಳೂರಿನ ೧೬೨೪ರ ಶಾಸನದಲ್ಲಿ ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಚಾಮರಾಜ ಒಡೆಯನು ಆಡಳಿತ ನಡೆಸುತ್ತಿದ್ದಾಗ, ಮೊಳೂರಿನ ಲಕ್ಷ್ಮೀಕಾಂತ ದೇವರಿಗೆ ದೀಪಮಾಲೆಕಂಬ ನಿಲ್ಲಿಸಿದ್ದನ್ನು ದಾಖಲಿಸಿದೆ. ಕಂಠೀರವ ನರಸರಾಜೊಡೆಯರ ಆಳ್ವಿಕೆಗೆ ಸಂಬಂಧಿಸಿದ ೧೬೫೫ರ ನರಸೀಪುರ ಶಾಸನ, ಹುರದ ಪ್ರಭು ಮಾಧವನಾಯಕನ ಮಗ ದಳವಾಯಿ

ಲಿಂಗರಾಜಯ್ಯನು ನರಸಿಂಹಸ್ವಾಮಿಯ ಸೇವೆಗೆಂದು ಸರಗೂರು ಸ್ಥಳದ ನರಸೀಪುರ ಗ್ರಾಮವನ್ನು ದತ್ತಿಬಿಟ್ಟ ಅಂಶವನ್ನು ತಿಳಿಸಿದರೆ, ದೊಡ್ಡ ದೇವರಾಜೊಡೆಯನ ಕಾಲಕ್ಕೆ ಸೇರಿದ ಹೊರಮರಳಿಯ ೧೬೯೯ರ ಶಾಸನ, ಯುವರಾಜ ಕಂಠಿರವ ಅರಸರು ಕೊತ್ತೆಗಾಲಕ್ಕೆ ಸೇರಿದ ಉಪಗ್ರಾಮ ಹೊರಮಳಲಿಪುರವನ್ನು ನಂಜಣ್ಣ ವಾರಣಾಸಿ ಎಂಬುವರಿಗೆ ದತ್ತಿ ನೀಡಿದ್ದನ್ನು ದಾಖಲಿಸಿದರೆ, ಕಣಿಯನಹುಂಡಿಯ ೧೬೭೦ರ ಶಾಸನ, ಕೊತ್ತೆಗಾಲಕ್ಕೆ ಸೇರಿದ ಬಿಳುಗುಂಬ ಗ್ರಾಮಕ್ಕೆ 'ಕಂಠೀರವಪುರ' ಎಂದು ಹೆಸರಿಟ್ಟು ಕಾಟೂರ ಬೆಟ್ಟಪ್ಪಯ್ಯಂಗೆ ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ. ಆಲನಹಳ್ಳಿಯ ೧೬೭೦ರ ಇನ್ನೊಂದು ಶಾಸನ, ಕಂಠಿರವ ನರಸರಾಜರು, ಬಿಡಾರದ ವೆಂಕಟಯ್ಯನನ್ನು ಕಾಶಿಗೆ ಕಳುಹಿಸಿದ ನಿಮಿತ್ತ ಆರು ವರಾಹ ಬೆದ್ದಲು ಭೂಮಿಯನ್ನು ಅವರ ಕುಟುಂಬ ವರ್ಗದವರಿಗೆ ದತ್ತಿ ಬಿಟ್ಟಿದ್ದನ್ನು ಹೇಳಿದರೆ, ಕಿತ್ತೂರಿನಲ್ಲಿರುವ ೧೬೭೨ರ ಶಾಸನದಿಂದ ಕಂಠಿರವರು ಕಿತ್ತೂರ ಸೇನಬೋವನಿಗೆ ಕಿತ್ತೂರಿನಲ್ಲಿ ಭೂದಾನ ಬಿಟ್ಟ ಅಂಶ ವೇದ್ಯವಾಗುತ್ತದೆ. ಮುಂದೆ ಹೈದರ್-ಟಿಪ್ಪು ಸರ್ವಾಧಿಕಾರವನ್ನೂ ವೀಕ್ಷಿಸಿದ ಈ ಪ್ರದೇಶಕ್ಕೆ ಫ್ರಾನ್ಸಿಸ್ ಬುಕಾನನ್ ೧೮೦೦ರ ಸೆಪ್ಟೆಂಬರ್ ಮಾಹೆಯಲ್ಲಿ ಭೇಟಿ ನೀಡಿದ್ದು ಅವನ ಪ್ರವಾಸಿ ವರದಿಯಲ್ಲಿ ಅಪರೂಪದ ಅಂಶಗಳಿವೆ. ಮುಮ್ಮಡಿ ಕೃಷ್ಣರಾಜೊಡೆಯರ ಆಳ್ವಿಕೆಗೆ ಸೇರಿದ ಶಂಕಹಳ್ಳಿಯ ೧೮೧೬ರ ಶಾಸನ, ಆಸ್ಥಾನ ವಿದ್ವಾಂಸರಾದ ವೀಣೆ ವೆಂಕಟಸುಬ್ಬಯನವರಿಗೆ ಅರಸರು ಶಂಖಹಳ್ಳಿ ಗ್ರಾಮವನ್ನೂ ಚಿಕ್ಕೂರಿನ ೧೮೧೮ರ ಶಾಸನ ಚಿಕ್ಕೂರು ಗ್ರಾಮ ಸೇರಿದಂತೆ ನಾಲ್ಕು ಉಪಗ್ರಾಮಗಳ ಜೊತೆಗೆ ಕೆರೆಯನ್ನೂ ದತ್ತಿ ಬಿಟ್ಟ ಅಂಶವನ್ನು ಸಾರುತ್ತದೆ. ಇದೇ ಅರಸರ ನರಸೀಪುರದ ೧೮೧೮ರ ಇನ್ನೊಂದು ಶಾಸನದಿಂದ ದಳವಾಯಿಕೆರೆಗೆ ತಪ್ಪಿಸಿಕೊಂಡು ಬಂದಿದ್ದ ಆನೆಯೊಂದನ್ನು ಅರಸರ ಅಪ್ಪಣೆಯಂತೆ ಗುಂಡಿನಿಂದ ಹೊಡೆಸಿ ಒಪ್ಪಿಸಿದ ಹೆಗ್ಗಡದೇವನಕೋಟೆ ತಾಲೂಕಿನ ಅಮಲುದಾರ ಶಾಂತಯ್ಯನ ಮಗ ದೇವಚಂದ್ರನಿಗೆ ಸಾಗರ ಹೋಬಳಿಗೆ ಸೇರಿದ ನರಸೀಪುರ ಗ್ರಾಮದಲ್ಲಿ ೧೨ ವರಾಹ ಆದಾಯದ ಬೆದ್ದಲು ಭೂಮಿಯನ್ನು ಇನಾಮಾಗಿ ನೀಡಿದ್ದು ಗೊತ್ತಾಗುತ್ತದೆ. ಮೈಸೂರು ಅರಸರ ಆಡಳಿತಾವಧಿಗೆ ಸೇರಿದ ಇನ್ನೂ ಸಾಕಷ್ಟು ಶಾಸನಗಳು ತಾಲೂಕಿನಲ್ಲಿದ್ದರೂ ಅವುಗಳಲ್ಲಿ ಆಳರಸರ ಹೆಸರು ಉಲ್ಲೇಖಗೊಂಡಿಲ್ಲ.

**ಸ್ವಾತಂತ್ರ್ಯ ಹೋರಾಟಗಾರರು** : ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿಯು ಬಹಳ ತಡವಾಗಿ ಆರಂಭವಾಯಿತು. ಸಂಸ್ಥಾನದಲ್ಲೂ ಅನೇಕ ದೇಶಾಭಿಮಾನಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಹಿಂದು, ದಿ ನ್ಯೂ ಇಂಡಿಯಾ ಮತ್ತು ಸ್ಥಳೀಯ ವೃತ್ತ ಪತ್ರಿಕೆಗಳು ಮೈಸೂರಿನಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸಲು ಕಾರಣವಾದವು. ಹೆಗ್ಗಡದೇವನಕೋಟೆ ತಾಲೂಕಿನವರೇ ಆದ ಎಂ. ವೆಂಕಟಕೃಷ್ಣಯ್ಯ ತಿಲಕರ ಧ್ಯೇಯೋದ್ದೇಶಗಳನ್ನು ತಮ್ಮ ಪತ್ರಿಕೆಯ ಮೂಲಕ (೬-೧೦-೧೮೮೨) ಪ್ರತಿಪಾದಿಸಿದ್ದು ಗಮನಾರ್ಹವಾಗಿತ್ತು.

ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಕ್ರಿಶ್ಚಿಯನ್ ಮಿಷಿನರಿಗಳ ಹಿಂದೂಧರ್ಮದ ಅವಹೇಳನವನ್ನು ಖಂಡಿಸಿ ತಗಡೂರು ರಾಮಚಂದ್ರರಾಯರು ಹೋರಾಟ ನಡೆಸಿದರೆ, ಎಂ. ವೆಂಕಟಕೃಷ್ಣಯ್ಯನವರು ಮರಿಮಲ್ಲಪ್ಪ ಪ್ರೌಢಶಾಲೆಯ ಪ್ರಿನ್ಸಿಪಾಲರಾಗಿದ್ದಾಗ ತಗಡೂರು ರಾಮಚಂದ್ರರಾವ್, ಎಂ.ಎನ್. ಜೋಯಿಸ್, ಪಾಲಹಳ್ಳಿ ಸೀತಾರಾಮಯ್ಯ, ಅಗರಂ ರಂಗಯ್ಯ ಮೊದಲಾದವರಿಗೆ ರಾಷ್ಟ್ರೀಯ ಆಂದೋಲನದಲ್ಲಿ ಪಾಲ್ಗೊಳ್ಳಲು ಸ್ಫೂರ್ತಿಯಾದರು. ತಿಲಕರ ನಿಧನಾನಂತರ ಮೈಸೂರಿನಲ್ಲಿ ೧೯೨೦ರಲ್ಲಿ ತಿಲಕರ ರಾಷ್ಟ್ರೀಯ ಸಂಘ ಸ್ಥಾಪನೆಯಾಯಿತು. ಆ ಸಂಘದ ಸ್ಥಾಪನೆಯಲ್ಲಿ ಸ್ವಾಮಿರಾವ್, ರಾಮಸ್ವಾಮಿ ಅಯ್ಯಂಗಾರ್, ಜಿ.ವಿರೂಪಾಕ್ಷ, ನಾರಾಯಣ ಮೊದಲಾದವರಿದ್ದರು.

೧೯೨೧ ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸ್ಥಾಪನೆಗಾಗಿ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಅನುಮತಿ ದೊರೆತ ಬೆನ್ನಲ್ಲೇ ಕರ್ನಾಟಕದ ಎಲ್ಲಾ ಕಡೆ ಅದರ ಶಾಖೆಗಳು ಪ್ರಾರಂಭಗೊಂಡವು. ಮೈಸೂರಿನ ಶಾಖೆಗೆ (ಮೈಸೂರು ಡಿ.ಸಿ.ಸಿ.) ಎಂ. ವೆಂಕಟಕೃಷ್ಣಯ್ಯನವರು ಒಂದರ್ಥದಲ್ಲಿ ನಾಂದಿಯನ್ನು ಹಾಡಿದವರು. ಹೆಚ್.ಡಿ. ಕೋಟೆ ತಾಲೂಕಿನ ಎಂ. ವೆಂಕಟಕೃಷ್ಣಯ್ಯನವರು, ತಾತಯ್ಯ ಎಂದೇ ಪ್ರಸಿದ್ಧರಾಗಿದ್ದು, ಸ್ವಾತಂತ್ರ್ಯ ಚಳವಳಿಗೆ, ಪತ್ರಿಕಾರಂಗಕ್ಕೆ, ಶಿಕ್ಷಣಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರವಾದದ್ದು.

ತಾಲೂಕಿನ ಹೆಚ್.ಬಿ. ಲಿಂಗಣ್ಣಯ್ಯ, ನೂರಲಕುಪ್ಪೆಯ ಎನ್.ಟಿ. ಸುಂದರದಾಸ್, ಮಾದಾಪುರದ ಎಸ್. ಪುಟ್ಟಸ್ವಾಮಿ, ಹೊಮ್ಮರಗಳ್ಳಿಯ ಹೆಚ್.ಕೆ. ತಿಮ್ಮಯ್ಯ, ಸರಗೂರಿನ ಎಂ.ಡಿ.ಶಿವಪ್ಪ ಮೊದಲಾದವರೆಲ್ಲಾ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದವರು, ಸ್ವಾತಂತ್ರ್ಯಕ್ಕಾಗಿ ತಮ್ಮ ಬದುಕನ್ನು ಮುಡುಪಾಗಿಟ್ಟವರು. ಇವರ ಜೊತೆಗೆ ಹೆಗ್ಗಡದೇವನಕೋಟೆಯ ಹಿರಿಯಪತ್ರಿಕೋದ್ಯಮಿಗಳಾದ ಹೆಚ್.ಸಿ. ಶೇಷಾದ್ರಿ ಅವರು ಸ್ವಾತಂತ್ರ್ಯ ಹೋರಾಟಗಾರರ ಸಂಪರ್ಕವನ್ನಿಟ್ಟುಕೊಂಡು ಚಳವಳಿಗಳಲ್ಲಿ ಭಾಗವಹಿಸುತ್ತಿದ್ದರು. ಮೂರು ವರ್ಷಗಳ ಕಾಲ ತಾಲೂಕಿನ ಕ್ಯಾತನಹಳ್ಳಿಯಲ್ಲಿ ಆಹಾರ ಇಲಾಖೆ ಗುಮಾಸ್ತರಾಗಿ, ಜಿ.ಬಿ. ಸರಗೂರು, ಕಣಿಯನಹುಂಡಿ, ಬೆಟ್ಟದಬೀಡು ಗ್ರಾಮಗಳಿಗೆ ರೇಷನ್ ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಬರುತ್ತಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಚಂದ್ರಶೇಖರಾರಾಧ್ಯರು ನಂತರ ಉಪಾಧ್ಯಾಯರಾಗಿ ಸೇವೆಸಲ್ಲಿಸಿ ನಿವೃತ್ತರಾದರು.

ಸ್ವಾತಂತ್ರ್ಯ ಹೋರಾಟಗಾರರಾದ ಹೆಗ್ಗಡದೇವನಕೋಟೆಯ ಹೆಚ್.ಬಿ. ಲಿಂಗಣ್ಣಯ್ಯನವರು ಪುರಸಭಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ನಂತರ ಬಿ.ಎಸ್. ರಂಗಯ್ಯಂಗಾರ್‌ರವರು ೧೯೬೪ರಿಂದ ಸುಮಾರು ಎರಡು ದಶಕಗಳ ಕಾಲ ಪುರಸಭಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಬಿ.ಎಸ್. ರಂಗಯ್ಯಂಗಾರ್ ಬಹುಮುಖ ಪ್ರತಿಭೆಯುಳ್ಳವರು. ತಾಲೂಕಿನ ಕೆ.ಬೆಳತೂರಿನ ಇವರು ಕೃಷಿಕರಾಗಿದ್ದು, ತಾಲೂಕಿನ ಪ್ರಗತಿ ಪುರೋಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅವರ ಸಹೋದರ

ಬಿ.ಎಸ್. ರಾಮಪ್ರಸಾದ್, ಐ.ಎ.ಎಸ್. ಪದವಿ ಪಡೆದು ನಾನಾ ಹುದ್ದೆಗಳನ್ನು ಅಲಂಕರಿಸಿ ಒಳ್ಳೆಯ ಆಡಳಿತಗಾರರೆಂದು ಹೆಸರು ಪಡೆದಿದ್ದು, ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿಗಳಾಗಿದ್ದರು. ತಾಲೂಕಿನ ಆರ್ಥಿಕ ವ್ಯವಹಾರಗಳು ತಾಲೂಕು ಖಜಾನೆಯಲ್ಲಿ ನಡೆಯುತ್ತಿದ್ದ ಸಮಯದಲ್ಲಿ ೧೯೬೭ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆ ಹಾಗೂ ೧೯೭೭ರಲ್ಲಿ ವಿಜಯಾ ಬ್ಯಾಂಕ್ ಶಾಖೆಗಳು ಹೆಚ್.ಡಿ. ಕೋಟೆಯಲ್ಲಿ ಪ್ರಾರಂಭವಾಗಲು ಪ್ರಮುಖ ಕಾರಣರಾಗಿರುವ ಬಿ.ಎಸ್. ರಂಗಯ್ಯಂಗಾರ್, ತಾತಯ್ಯನವರು ಸ್ಥಾಪಿಸಿರುವ ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಪ್ರಸ್ತುತ ಸೇವೆ ಸಲ್ಲಿಸುತ್ತಿದ್ದಾರೆ.

**ಪ್ರಜಾ ಪ್ರತಿನಿಧಿ ಸಭೆ :** ಸ್ವಾತಂತ್ರ್ಯ ಪೂರ್ವದಲ್ಲಿ ಸಂಸ್ಥಾನದಲ್ಲಿ ದಿವಾನರಾಗಿದ್ದ ರಂಗಚಾರ್ಲು ಅವರು ಪ್ರಜಾಪ್ರತಿನಿಧಿ ಸಭೆಯನ್ನು ಭರತಖಂಡದಲ್ಲೇ ಮೊದಲ ಪ್ರಯೋಗವಾಗಿ ೧೮೮೧ರ ಆಗಸ್ಟ್ ೨೫ ರಂದು ಮೈಸೂರಿನಲ್ಲಿ ಸ್ಥಾಪಿಸಿದರು. ಪ್ರಜಾಪ್ರತಿನಿಧಿಸಭೆಗೆ ಆಯ್ಕೆ ಮಾಡುವಾಗ ಆರಂಭದಲ್ಲಿ ಕೆಲವು ನಿಬಂಧನೆಗಳನ್ನು ವಿಧಿಸಲಾಗಿತ್ತು. ವ್ಯವಸಾಯ, ವಾಣಿಜ್ಯ, ಶಿಕ್ಷಣ, ಕಾನೂನು ಕ್ಷೇತ್ರಗಳಲ್ಲಿ ದಕ್ಷರಾದವರನ್ನು, ಪ್ರಾಮಾಣಿಕರಾದವರನ್ನು, ಶ್ರೇಷ್ಠರಾದ ಪ್ರಭಾವಿ ವ್ಯಕ್ತಿಗಳನ್ನು ಗುರುತಿಸಿ ನಾಮಕರಣ ಮಾಡಲಾಗುತ್ತಿತ್ತು. ಅದರಂತೆ ಈ ತಾಲೂಕಿನ ಶಫೀರ್‌ಖಾನ್ ಕಿತ್ತೂರು (೧೮೮೧–೮೩), ಜಿನ್ನಪ್ಪ (೧೮೮೯–೯೦, ೯೩, ೯೫, ೯೬), ಕಾರಿಗಾಲ ಕೊಂಡೇಗೌಡ (೧೮೯೩), ಮಳಲ್ಲಿ ಪಟೇಲ ದಾಸೇಗೌಡ (೧೮೮೪–೮೬, ೮೯–೯೨, ೧೯೦೧), ಮಗ್ಗೆವೆಂಕಟ ನಾಗಪ್ಪ (೧೮೯೭), ಮಗ್ಗೆ ಸುಬ್ಬರಾವ್ (೧೯೦೩–೦೫), ನರ್ಲಗುಪ್ಪೆ ಪಟೇಲ್ ಹುಚ್ಚೇಗೌಡ (೧೮೮೪–೮೬, ೮೮, ೯೦, ೯೩), ರಂಗೈಯ್ಯಂಗಾರ್ (೧೮೮೮–೯೬, ೧೯೦೧–೦೭), ರಹಮಾನ್ ಸಾಬ್ (೧೮೮೯), ಸುಬ್ಬರಾವ್ (೧೮೮೯–೯೧, ೯೩, ೯೯), ವೆಂಕಟನಾಗಪ್ಪ (೧೮೯೯), ಲಕ್ಷ್ಮೀನಾರಾಣಪ್ಪ (೧೯೦೮–೦೯, ೧೯೨೧–೨೩), ಎಂ. ಸುಬ್ಬರಾವ್ (೧೯೦೮–೨೬), ಸಯ್ಯದ್ ರಹಮನ್ ಸಾಬ್ (೧೯೧೨–೧೪), ದಾಸೇಗೌಡ (೧೯೨೪–೨೬), ನಾರಣಪ್ಪ (೧೯೨೭–೨೯), ಸಿ. ದಾಸಪ್ಪ (೧೯೩೦–೩೬), ಬಸಪ್ಪ (೧೯೩೪–೩೬), ಬದಲಗುಪ್ಪೆ ಲಿಂಗೇಗೌಡ (೧೯೩೦–೩೩), ಎನ್. ಜೋಗಿಮಲ್ಲಯ್ಯ (೧೯೩೭–೪೦), ಎಚ್.ಬಿ. ಬಸಪ್ಪ (೧೯೩೭–೪೯), ಎಚ್.ಕೆ. ತಿಮ್ಮಯ್ಯ (೧೯೪೧–೪೪), ಎಚ್. ಪುಟ್ಟಸ್ವಾಮಿ (೧೯೪೫–೪೯) ಮುಂತಾದವರ ೧೮೮೧–೧೯೪೯ರವರೆಗೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

**ಚುನಾವಣೆಗಳು :** ಸ್ವಾತಂತ್ರ್ಯ ನಂತರದಲ್ಲಿ ೧೯೫೨–೨೦೦೯ರವರೆಗೆ ತಾಲೂಕಿನಲ್ಲಿ ನಡೆದಿರುವ ಲೋಕಸಭಾ ಹಾಗೂ ವಿಧಾನಸಭಾ ಚುನಾವಣಾ ಫಲಿತಾಂಶವನ್ನು ಇಲ್ಲಿ ನೀಡಲಾಗಿದೆ. ಚುನಾವಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಳು ಬೆಂಗಳೂರಿನಲ್ಲಿರುವ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಲಭಿಸುತ್ತದೆ.

# ಮೈಸೂರು ಲೋಕಸಭಾಕ್ಷೇತ್ರದ ಚುನಾವಣಾ ಫಲಿತಾಂಶ (೧೯೫೨-೨೦೦೯)

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ದ್ವಿತೀಯ ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ |
|---|---|---|
| ೧ | ೨ | ೩ |
| ೧೯೫೨ ದ್ವಿ ಸದಸ್ಯ | ೧) ಎನ್.ರಾಚಯ್ಯ (ಭಾರಾಕಾಂ) ೨,೦೯,೨೦೩ (೨೯.೩೭) | ಕ.ಮ.ಪ್ರ.ಪಾ., ೧,೪೨,೩೬೩ (೧೯.೯) |
| | ೨) ಎಂ.ಎಸ್.ಗುರುಪಾದಸ್ವಾಮಿ (ಕೆಎಂಪಿಪಿ)೧,೯೬,೧೭೫ (೨೭.೫೪) | ಭಾ.ರಾ.ಕಾಂ., ೧,೬೪,೫೭೭ (೨೩.೧೦) |
| ೧೯೫೭ ದ್ವಿಸದಸ್ಯ | ೧) ಎನ್.ಶಂಕರಯ್ಯ (ಭಾರಾಕಾಂ) ೨,೩೯,೫೭೨ (೩೧.೭೧) | ಪ್ರ.ಸ.ಪ., ೧,೮೪,೩೭೦ (೨೪.೪೦) |
| | ೨) ಎಸ್.ಎಂ.ಸಿದ್ಧಯ್ಯ (ಭಾರಾಕಾಂ) ೧,೮೬,೧೯೫ (೨೪-೬೫) | ಪ್ರ.ಸ.ಪ., ೧,೪೫,೩೨೩ (೧೯.೨೪) |
| ೧೯೬೨ ಮೈಸೂರು* | ಎಂ.ಶಂಕರಯ್ಯ (ಭಾರಾಕಾಂ) ೯೭,೪೯ (೪,೨೮೫) | ಸ್ವ.ಪ., ೪೦,೦೪೩ (೧೭.೫೨) |
| ೧೯೬೭ ಮೈಸೂರು | ಎಚ್.ಡಿ.ತುಳಸಿದಾಸ್ (ಭಾರಕಾಂ) ೧,೦೮,೮೫೫ (೪೦.೦೯) | ಪಕ್ಷೇತರ, ೯೩,೫೬೬ (೩೪.೪೬) |
| ೧೯೭೧ ಮೈಸೂರು | ಎಚ್.ಡಿ.ತುಳಸಿದಾಸ್ ರಾ.ಕಾಂ (ಜೆ) ೨,೧೩,೭೨೪ (೭೪.೪೧) | ರಾ.ಕಾಂ.(ಎನ್), ೯೬,೨೭೨ (೩೫.೩೧) |
| ೧೯೭೭ ಮೈಸೂರು | ಎಚ್.ಡಿ.ತುಳಸಿದಾಸ್ (ಕಾಂಗ್ರೆ) ೧,೯೫,೬೫೭ (೫೩.೬೮) | ಭಾ.ಮೋ.ದ., ೧,೫೩,೯೮೯ (೪೨.೨೫) |
| ೧೯೮೦ ಮೈಸೂರು | ಎಂ.ರಾಜಶೇಖರ ಮೂರ್ತಿ (ಕಾಂಗ್ರೆ) ೧,೯೫,೭೨೪ (೪೯.೪೭) | ಭಾ.ಪಾ.ಕಾಂ.(ಅರಸು), ೧,೧೨,೬೮೮ (೨೮.೪೮) |
| ೧೯೮೪ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಕಾಂಗ್ರೆ) ೨,೪೭,೭೫೪ (೫೪.೭೦) | ಪಕ್ಷೇತರ, ೧,೮೩,೧೪೪ (೪೦.೩೩) |
| ೧೯೮೯ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಕಾಂಗ್ರೆ) ೩,೮೪,೮೮೮ (೫೫.೬) | ಜ.ಪ.(ಜೆ.ಪಿ), ೧,೩೫,೫೨೪ (೧೯.೬) |

| ೧ | ೨ | ೩ |
|---|---|---|
| ೧೯೯೧ ಮೈಸೂರು | ಶ್ರೀಮತಿ ಚಂದ್ರಪ್ರಭಾ ಅರಸು (ಕಾಂಗ್ರೆ) ೨,೨೫,೮೮೧ (೩೦.೪೭) | ಭಾ.ಜ.ಪ., ೨,೦೮,೯೯ (೩೬.೫೨) |
| ೧೯೯೬ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರು ೨,೫೮,೨೯ (೩೪.೮೨) | ಜ.ದ., ೨,೪೬,೬೩೨ (೩೩.೨೫) |
| ೧೯೯೮** ಮೈಸೂರು | ಸಿ.ಎಚ್.ವಿಜಯಶಂಕರ್ (ಭಾಜಪ) ೩,೫೫,೮೪೬ (೪೨.೧೦) | ಭಾ.ರಾ.ಕಾಂ., ೨,೫೨,೮೨೨ (೨೯.೯೧) |
| ೧೯೯೯ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರು (ಕಾಂಗ್ರೆ) ೩,೩೮,೦೫೧ (೩೮) | ಭಾ.ಜ.ಪ., ೩,೨೪,೬೨೦ (೩೬) |
| ೨೦೦೪ ಮೈಸೂರು | ಸಿ.ಎಚ್.ವಿಜಯಶಂಕರ್ (ಭಾಜಪ) ೩,೧೬,೪೪೨ (೩೩.೦೬) | ಜ.ದ.(ಜಾ), ೩,೦೬೨೯೨ (೩೨) |
| ೨೦೦೯ | ೨೦೦೭ರ ಚುನಾವಣಾ ಕ್ಷೇತ್ರ ಪುನಾರಚನೆ ಕಾಯ್ದೆ ತಿದ್ದುಪಡಿಯಂತೆ ಈ ವಿಧಾನಸಭಾ ಕ್ಷೇತ್ರವು ಪ್ರಸ್ತುತ ಚಾಮರಾಜನಗರ (ಮೀ) ಲೋಕಸಭಾ ಕ್ಷೇತ್ರಕ್ಕೆ ಒಳಪಟ್ಟಿದ್ದು ೨೦೦೯ರ ಚುನಾವಣೆಯಲ್ಲಿ ಆರ್. ಧ್ರುವನಾರಾಯಣ್ ಆಯ್ಕೆಯಾಗಿರುತ್ತಾರೆ. | |

* ಮೈಸೂರು ಜಿಲ್ಲೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ರೂಪಿಸಲಾಯಿತು.

** ಮೈಸೂರು ಜಿಲ್ಲೆಯು ವಿಭಜಿಸಲ್ಪಟ್ಟು (೧೯೯೭) ಚಾಮರಾಜನಗರ ಜಿಲ್ಲೆಯು ಅಸ್ತಿತ್ವಕ್ಕೆ ಬಂದಿತು.

* ಮೈಸೂರು ಲೋಕಸಭಾ ಕ್ಷೇತ್ರವು ಮೈಸೂರು ತಾಲೂಕಿನ ನಾಲ್ಕು (ಕೃಷ್ಣರಾಜ, ನರಸಿಂಹರಾಜ, ಚಾಮುಂಡೇಶ್ವರಿ ಹಾಗೂ ಚಾಮರಾಜ), ಹೆಗಡೆದೇವನಕೋಟೆ, ಹುಣಸೂರು, ಕೃಷ್ಣರಾಜನಗರ ಹಾಗೂ ಪಿರಿಯಾಪಟ್ಟಣ, ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ.

## ಹೆಗ್ಗಡದೇವನಕೋಟೆ (ಮೀ)ವಿಧಾನಸಭಾ ಕ್ಷೇತ್ರದ ಚುನಾವಣಾ ವಿವರ (೧೯೫೨–೨೦೦೮)

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ದ್ವಿತೀಯ ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ |
|---|---|---|
| ೧ | ೨ | ೩ |
| ೧೯೫೨ ಹೆಗ್ಗಡದೇವನಕೋಟೆ (ಪ.ಜಾ.) (ದ್ವಿಸದಸ್ಯ ಕ್ಷೇತ್ರ ಗುಂಡ್ಲುಪೇಟೆಗೆ ಸೇರಿತ್ತು) | ಸಿದ್ಧಯ್ಯ ಉರುಫ್ ಕೂನ್ನಯ್ಯ (ಪಕ್ಷೇತರ) ೧೨,೬೦೮ (೧೫.೯೨) | ಪಕ್ಷೇತರ ೧೦,೨೭೪ (೧೨.೯೮) |
| ೧೯೫೭ ಹೆಗ್ಗಡದೇವನಕೋಟೆ (ಪ.ಜಾ.) (ದ್ವಿಸದಸ್ಯ ಕ್ಷೇತ್ರ ಹುಣಸೂರಿಗೆ ಸೇರಿತ್ತು) | ಎನ್. ರಾಚಯ್ಯ *(ಭಾ.ರಾ.ಕಾಂ) ೨೦,೫೮೩ (೨೩.೩೭) | ಪಕ್ಷೇತರ ೧೩,೩೩೩ (೧೫.೧೪) |
| ೧೯೬೨ ಹೆಗ್ಗಡದೇವನಕೋಟೆ (ಪ.ಜಾ.) | ಆರ್.ಪೀರಣ್ಣ (ಸ್ವತಂತ್ರ ಪಕ್ಷ) ೧೪,೭೮೮ (೪೭.೨೪) | ಭಾ.ರಾ.ಕಾಂ. ೯,೯೪೨ (೩೧.೭೬) |
| ೧೯೬೭ ಹೆಗ್ಗಡದೇವನಕೋಟೆ (ಪ.ಜಾ.) | ಆರ್.ಪೀರಣ್ಣ (ಭಾ.ರಾ.ಕಾಂ) ೨೦,೬೮೯ (೬೭.೯೭) | ಪಕ್ಷೇತರ ೬,೭೩೨ (೨೨.೧೨) |
| ೧೯೭೨ ಹೆಗ್ಗಡದೇವನಕೋಟೆ (ಪ.ಜಾ.) | ಆರ್.ಪೀರಣ್ಣ (ರಾ.ಕಾಂ.(ಒ)) ೨೧,೮೫೯ (೫೧.೪೫) | ಭಾ.ರಾ.ಕಾಂ ೨೦,೬೨೮ (೪೫.೫೫) |
| ೧೯೭೮ ಹೆಗ್ಗಡದೇವನಕೋಟೆ (ಪ.ಜಾ.) | ಶ್ರೀಮತಿ ಸುಶೀಲಾ ಚಲುವರಾಜ್ (ಕಾಂಗ್ರೈ) ೨೭,೮೨೧ (೪೮.೨೫) | ಜನತಾಪಕ್ಷ ೧೬,೬೬೧ (೨೮.೯೦) |
| ೧೯೮೩ ಹೆಗ್ಗಡದೇವನಕೋಟೆ (ಪ.ಜಾ.) | ಎಚ್.ಬಿ.ಚಲುವಯ್ಯ (ಜ.ಪ) ೩೩,೮೪೦ (೫೪.೩೧) | ಭಾ.ರಾ.ಕಾಂ. ೧೩,೬೫೨ (೨೧.೯೦) |
| ೧೯೮೫ ಹೆಗ್ಗಡದೇವನಕೋಟೆ (ಪ.ಜಾ.) | ಎಂ.ಶಿವಣ್ಣ (ಭಾ.ರಾ.ಕಾಂ) ೨೬,೨೮೬ (೩೯.೨೭) | ಜನತಾಪಕ್ಷ ೨೪,೬೦೧ (೩೬.೭೫) |
| ೧೯೮೯ ಹೆಗ್ಗಡದೇವನಕೋಟೆ (ಪ.ಜಾ.) | ಎಂ. ಶಿವಣ್ಣ (ಭಾ.ರಾ.ಕಾಂ) ೨೭,೫೦೭ (೩೨.೨೫) | ಜನತಾಪಕ್ಷ ೨೧,೫೭೩ (೨೫.೩೦) |
| ೧೯೯೪ ಹೆಗ್ಗಡದೇವನಕೋಟೆ (ಪ.ಜಾ.) | ಎನ್.ನಾಗರಾಜು (ಜದ) ೪೧,೨೦೮ (೩೯.೬೪) | ಭಾ.ರಾ.ಕಾಂ. ೪೦,೧೮೨ (೩೮.೬೬) |
| ೧೯೯೯ ಹೆಗ್ಗಡದೇವನಕೋಟೆ (ಪ.ಜಾ.) | ಎಂ.ಶಿವಣ್ಣ *** (ಭಾರಾಕಾಂ) ೪೫,೧೩೬ (೩೯) | ಭಾ.ರಾ.ಕಾಂ. ೨೯,೨೬೮ (೨೬) |
| ೨೦೦೪ ಹೆಗ್ಗಡದೇವನಕೋಟೆ (ಪ.ಜಾ.) | ಎಂ.ಪಿ.ವೆಂಕಟೇಶ್, ಜ.ದ.(ಜಾ) ೫೦,೭೨೯ (೪೦) | ಭಾ.ಜ.ಪ. ೩೮,೪೧೨ (೩೦.೩೦) |
| ೨೦೦೮ ಹೆಗ್ಗಡದೇವನಕೋಟೆ (ಪ.ಪಂ.) | ಚಿಕ್ಕಣ್ಣ (ಭಾರಾಕಾಂ) ೪೩,೨೨೨ (೩೪.೪೮) | ಭಾ.ಜ.ಪ. ೩೦,೬೮೦ (೨೪.೪೭) |

* ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದಾರೆ.